॥ ಶ್ರೀ ಭೋಗಾಪುರೇಶ ಪ್ರಸನ್ನ ॥

ರಾಗ : ಪೂರ್ವಿ                                        ತಾಳ : ಆದಿತಾಳ

ಧಾಟಿ : ತರಣಿ ಪ್ರಕಾಶ ಯತಿ ವರದೇಂದ್ರ ।ಗುರುರಾಯ ಗುರುರಾಯ ॥ ಎಂಬಂತೆ

ನಿನ್ನಯ ಪಾದವನ್ನಜ ನಂಬಿದೆ ಭೋಗೇಶ ಭೋಗೇಶ ॥ ಪಲ್ಲವಿ ॥

ಅನ್ನಿಗನಲ್ಲವೊ ನಿನ್ನಯ ಭೃತ್ಯನು ।
ಬನ್ನವ ಬಿಡಿಸುತ । ಚೆನ್ನಾಗಿ ಕಾಯ್ವುದೋ ಭೋಗೇಶ ಭೋಗೇಶ ॥ ಅ.ಪಲ್ಲ ॥

ಎನ್ನ ಕಾಡುತಿಹ । ಕುನ್ನಿ ಶತೃಗಳ ।
ಇನ್ನಿಲ್ಲದಂತೆ ಮಾ । ಡೆನ್ನ ಕಾಯ್ವುದೋ ಭೋಗೇಶ ಭೋಗೇಶ ॥ ೧ ॥

ಭವದಲಿ ಬಿದ್ದಿಹ । ನವಗುಣವೆನಿಸದೆ ।
ಭವಮೋಚನೆ ಮಾಡಿ । ಜವದಿ ಕರಪಿಡಿ ॥ ಭೋಗೇಶ ಭೋಗೇಶ ॥ ೨ ॥

ತಂದೆ ತಾಯಿಯು ನೀನೆ । ಬಂಧು ಬಳಗ ನೀನೇ ।
ನಂದದಿ ಸಲಹೆಂದು । ವಂದಿಸಿ ಬೇಡುವೆ । ಭೋಗೇಶ ಭೋಗೇಶ ॥ ೩ ॥

ಸುಮತಿಯ ಕೊಟ್ಟು । ಕುಮತಿಯ ಕಳೆವುದೋ ।
ಅಮಿತ ಪರಾಕ್ರಮ । ಸುಮನಸರೊಡೆಯ ॥ ಭೋಗೇಶ ಭೋಗೇಶ ॥ ೪ ॥

ಸಿರಿ ಮುಕುಂದನ । ಚರಣಕಮಲವನ್ನು ।
ನಿರುತ ನೆನೆಯುವ । ವರಜೀವೋತ್ತಮ ಭೋಗೇಶ ಭೋಗೇಶ ॥ ೫ ॥

॥ ಶ್ರೀ ಗುರುಮಧ್ವೇಶಾರ್ಪಣಮಸ್ತು ॥